ಅ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಕೆ. ಎಸ್. ಬೀಳಗಿ (ಸಾರಿಗೆ ಸಚಿವರು)

ಅ) ಹೌದು

ಆ) ಕಾಮಗಾರಿ ಇಲಾಖೆಯ ಪರಿವೀಕ್ಷಣಾ ಮಂದಿರ ಅವರಣದಲ್ಲಿ ಬಸ್ ನಿಲ್ದಾಣ ವನ್ನು ನಿರ್ಮಿಸಲು ಉದ್ದೇಶಿಸಲಾಗಿತ್ತು. ಆದರೆ ಸ್ಥಳೀಯ ಜನರು ಇದನ್ನು ವಿರೋಧಿಸಿದರು.

ಈಗ ಬಸ್ ನಿಲ್ದಾಣವನ್ನು ಸರ್ವೆ ಸಂಖ್ಯೆ 193 ರಲ್ಲಿಯ ಕೆರೆಯಂಗಳದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದ್ದು ಇದನ್ನು ಅಭಿವೃದ್ಧಿಗೊಳಿಸಲು ಅಧಿಕ ವೆಚ್ಚವು ತಗಲುತ್ತದೆ. ಈ ನಿವೇಶನ ವನ್ನು ಉಚಿತವಾಗಿ ಮಂಜೂರು ಮಾಡಲು ಮತ್ತು ಅಭಿವೃದ್ಧಿ ವೆಚ್ಚದ ಅರ್ಧ ಭಾಗವನ್ನು ಭರಿಸಲು ಜಿಲ್ಲಾಧಿಕಾರಿಯವರನ್ನು ಕೋರಲಾಗಿದೆ.

ವಿಷಯ :- ಮೂಡಲಗಿ ಹಾಗೂ ಕುಲಗೋಡು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೇಲ್ದರ್ಜೆಗೆ ಪರಿವರ್ತನೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 384 (2865)

ಶ್ರೀ ವಿ. ಎಸ್. ಕೌಜಲಗಿ (ಅರಭಾವಿ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗೋಕಾಕ ತಾಲ್ಲೂಕಿನ ಮೂಡಲಗಿ ಹಾಗೂ ಕುಲಗೋಡ ಗ್ರಾಮಗಳಲ್ಲಿ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಕ್ರಮವಾಗಿ 50 ಹಾಗೂ 30 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?

ಆ) ಹಾಗಿದ್ದಲ್ಲಿ ಸದರಿ ಕಾಮಗಾರಿಗೆ ತಗಲುವ ವೆಚ್ಚವೆಷ್ಟು?

ಶ್ರೀ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಸಧ್ಯಕ್ಕಿಲ್ಲ.

ಆ) ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತದ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ಸಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ 41 ಪ್ರಶ್ನೆಗಳ ಪೈಕಿ 40 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ವಿಷಯ :- ಬೀದಿ ಭಾಗ್ಯ ಯೋಜನೆಯ ವಿವರಗಳು ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2269 (2941)

ಶ್ರೀ ಯು. ಬಿ. ಬಣಕಾರ (ಹಿರೇಕೆರೂರು) :- ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಬೀದಿ ಭಾಗ್ಯ ಯೋಜನೆಯ ವಿವರಗಳೇನು?

(ಆ) 1995-96 ನೇ ಸಾಲಿನಲ್ಲಿ ಜಿಲ್ಲಾವಾರು ನಿಗಧಿಪಡಿಸಿದ ಗುರಿ ಏನು? (ಆರ್ಥಿಕ)

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :-

(ಅ) ಬೀದಿ ಭಾಗ್ಯ ಯೋಜನೆಯನ್ನು ಆಶಾಕಿರಣ ಯೋಜನೆ ಎಂಬ ಹೆಸರಿನಲ್ಲಿ ಸರ್ಕಾರವು ಆದೇಶ ಸಂಖ್ಯೆ : ಎಸ್‌ಡಬ್ಲ್ಯೂ ಎಲ್ 50 ಎಲ್‌ಇಟಿ 92 ದಿನಾಂಕ : 26-8-1993 ರಿಂದ ಜಾರಿಗೆ ತರಲಾಗಿದೆ. ಈ ಯೋಜನೆಯನ್ವಯ 14 ರಿಂದ 65 ವರ್ಷಗಳ ವಯೋಮಿತಿಯೊಳಗೆ ಮತ್ತು ರೂ. 10,000-00 ಗಳ ವರೆಗೆ ವಾರ್ಷಿಕ ವರಮಾನ ಮಿತಿಯೊಳಗೆ ಬರುವ ಅಸಂಘಟಿತ ಕಾರ್ಮಿಕ ಕ್ಷೇತ್ರದ ಅಂದರೆ, ವ್ಯವಸಾಯ, ದೋಭಿ, ಹೂ, ಹಣ್ಣು, ತರಕಾರಿ ಮಾರುವವರು, ಕ್ಷೌರಿಕರು, ಮುಂತಾದ ಕಾರ್ಮಿಕರು ಅಪಘಾತಕ್ಕೀಡಾಗಿ ಗಾಯಗೊಂಡಲ್ಲಿ ಅವರು ಈ ಯೋಜನೆಯಡಿಯಲ್ಲಿ ಪರಿಹಾರ ಪಡೆಯಲು ಅರ್ಹರಾಗಿರುತ್ತಾರೆ. ಈ ಯೋಜನೆಯನ್ವಯ ಕಂದಾಯ ಇಲಾಖೆಯ ಉಪ ವಿಭಾಗಾಧಿಕಾರಿಗಳು ಪರಿಹಾರವನ್ನು ಮಂಜೂರು ಮಾಡುವ ಅಧಿಕಾರಿಗಳು ಪರಿಹಾರವನ್ನು ಮಂಜೂರು ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ. ಹಾಗೂ ಪರಿಹಾರದ ಹಣವನ್ನು ವಿತರಣೆ ಮಾಡುವ ಅಧಿಕಾರವನ್ನು ಕಾರ್ಮಿಕ ಅಧಿಕಾರಿಗಳು ಹೊಂದಿರುತ್ತಾರೆ. ಈ ಯೋಜನೆಯಡಿಯಲ್ಲಿ 1993-94 ನೇ ಸಾಲಿನಲ್ಲಿ ರೂ. 100 ಲಕ್ಷ ಹಾಗೂ 1994-95 ನೇ ಸಾಲಿನಲ್ಲಿಯೂ ಸಹ ರೂ. 100-00 ಲಕ್ಷಗಳ ಆಯವ್ಯಯವನ್ನು ಒದಗಿಸಲಾಗಿದೆ.

(ಆ) 1995-96 ನೇ ಸಾಲಿನಲ್ಲಿ ಸರ್ಕಾರದಿಂದ ಈ ಯೋಜನೆಯಡಿ ಬಿಡುಗಡೆ ಮಾಡಿರುವ ರೂ. 190-00 ಲಕ್ಷ ಆಯವ್ಯಯವನ್ನು ಜಿಲ್ಲಾವಾರು ಕಾರ್ಮಿಕ ಅಧಿಕಾರಿಗಳಿಗೆ ಇನ್ನೂ ಹಂಚಬೇಕಾಗಿದೆ.

ವಿಷಯ :- ರಾಜ್ಯದಲ್ಲಿರುವ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್‌ಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2270 (2940)

ಶ್ರೀ ಯು. ಬಿ. ಬಣಕಾರ (ಹಿರೇಕೆರೂರು) :- ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್‌ಗಳು ಎಷ್ಟು ; ಯಾವುವು ;

ಆ) 1-1-1994 ರಂದು ಪ್ರತಿಯೊಂದು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗಳಲ್ಲಿ ಇದ್ದ ನಿರುದ್ಯೋಗಿಗಳ ನೋಂದಣಿ ಎಷ್ಟು.